

'ರಾಕ್ ಗಾರ್ಡನ್'ನಲ್ಲಿ ಸಾಗಲು ಇಂಥವೇ ಇಕ್ಕಟ್ಟಾದ ದಾರಿ!

# ಇಲ್ಲಿ ಯಾವುದೂ ಅಲ್ಲ ವ್ಯರ್ಥ ಪ್ರತಿಯೊಂದಕ್ಕೂ ಇದೆ ಅರ್ಥ

ತ್ಯಾಜ್ಯದ ಮರುಬಳಕೆ ಹೇಗೆ ಮಾಡಿಕೊಳ್ಳಬಹುದು ಎಂಬುದಕ್ಕೆ ಚಂಡೀಗಢದ 'ರಾಕ್ ಗಾರ್ಡನ್' ಸಾರ್ವಕಾಲಿಕ ನಿದರ್ಶನ. ಸರ್ಕಾರಿ ನೌಕರನಾಗಿದ್ದ ನೆಕ್ ಚಾಂದ್ ಸಯಾನಿ, ತಮ್ಮ ವೃತ್ತಿಯಾಚೆಗೆ ಯೋಚಿಸಿ ರೂಪಿಸಿದ ಈ ಶಿಲೋದ್ಯಾನದಲ್ಲಿ ಮನಸೆಳೆಯುವ ಕಲಾಕೃತಿಗಳು ರೂಪುಗೊಂಡಿರುವುದು 'ವ್ಯರ್ಥ ಸಾಮಗ್ರಿ'ಗಳಿಂದಲೇ!

■ **ಆನಂದತೀರ್ಥ ಪ್ಯಾಟಿ**

ಹೆಸರಿಗೆ ಅದು ದಾರಿಯಷ್ಟೇ. ತೀರಾ ಇಕ್ಕಟ್ಟು. ಹೆಚ್ಚೆಂದರೆ ಮೂರ್ನಾಲ್ಕು ಅಡಿ ಅಗಲ. ಥೇಟ್ ಹಾವಿನಂತಿರುವ ಅಂಕುಡೊಂಕು ಹಾದಿಯಲ್ಲಿ ನಡೆದು, ತಲೆಗೆ ಎಲ್ಲಿ ಬಡಿಯುತ್ತದೋ ಎಂದು ದೇಹವನ್ನು ಕುಗ್ಗಿಸಿ ಬಾಗಿಲು ದಾಟಿದರೆ ವಿಶಾಲ ಪ್ರಾಂಗಣ. ಕಣ್ಣುಕುಕ್ಕುವಂತೆ ನವಿಲುಗಳು, ಮಕ್ಕಳು, ಒಂಟೆಜಿರಾಫೆಗಳು! ಅದೂ ಒಂದೆರಡಲ್ಲ, ನೂರಾರು. ಲೆಕ್ಕ ಹಾಕುತ್ತ ಹೋದರೆ ಅಂಕೆ ತಪ್ಪುವಂತೆ ಚೆಂದದ ಬೊಂಬೆಗಳು. ಅವುಗಳಿಗೆ ಬಳಸಿದ ಕಚ್ಚಾವಸ್ತುಗಳಾದರೂ ಏನು ಎಂದು ಹತ್ತಿರ ಹೋಗಿ ಗಮನಿಸಿದರೆ ಅಚ್ಚರಿಗೀಡಾಗುವ ಪರಿ!

ಚಂಡೀಗಢದ 'ರಾಕ್ ಗಾರ್ಡನ್' ಹೆಗ್ಗಳಿಕೆ ಇರುವುದೇ ಅದರಲ್ಲಿ. ತ್ಯಾಜ್ಯ ವಸ್ತುಗಳಿಂದ ರಚಿತವಾದ ಮನಮೋಹಕ ಕಲಾಕೃತಿಗಳೊಂದಿಗೆ ಇಡೀ ಉದ್ಯಾನವನ್ನು ಅಲಂಕರಿಸಿದ್ದು, ಒಂದೊಂದು ಹೆಜ್ಜೆಯಲ್ಲೂ ಸೌಂದರ್ಯ ಕಂಗೊಳಿಸುವಂತಿದೆ. ಚಂಡೀಗಢಕ್ಕೆ ಬಂದವರು ಶಿಲೋದ್ಯಾನ ನೋಡದೇ ಹೋದರೆ ಪ್ರವಾಸವೇ ಅಪೂರ್ಣ. ಅಂದ ಚೆಂದ ಅಂತಷ್ಟೇ ಅಲ್ಲ; ಮರುಬಳಕೆಯ ಮೌಲ್ಯವನ್ನೂ ಅದು ಅರ್ಥಪೂರ್ಣವಾಗಿ ಪ್ರತಿಪಾದಿಸುತ್ತಿದೆ.

ಸರ್ಕಾರಿ ಉದ್ಯೋಗಿಯೊಬ್ಬ (ನೆಕ್ ಚಾಂದ್ ಸಯಾನಿ) ಇದರ ರೂವಾರಿ ಎಂಬುದು ಮತ್ತೊಂದು ವಿಶೇಷ. ತನ್ನ ಕೆಲಸ ಕಾರ್ಯಗಳಾಚೆ ಯೋಚಿಸಿ, ಯಾರಿಗೂ ಗೊತ್ತಿಲ್ಲದಂತೆ ಈ ಉದ್ಯಾನ ಕಟ್ಟಿದ್ದು ಕಡಿಮೆ ಸಾಧನೆಯೇನಲ್ಲ. ಅವರು ಮಾಡಿದ ಕ್ರಿಯಾಶೀಲತೆಯ ಯೋಜನೆಯು 'ಅಕ್ರಮ' ಎಂದು ಹೊರಜಗತ್ತಿಗೆ ಗೊತ್ತಾದಾಗ, ಸ್ಥಳೀಯರೇ ಅವರ ಬೆಂಬಲಕ್ಕೆ ನಿಂತು 'ಅಕ್ರಮ'ವೆನಿಸಿದ ಉದ್ಯಾನಕ್ಕೆ ಮರುಜೀವ ನೀಡಿದರು. ಇಂಥ ಹಲವು ವೈಶಿಷ್ಟ್ಯಗಳಿಂದ ಕೂಡಿರುವ 'ರಾಕ್ ಗಾರ್ಡನ್'



'ರಾಕ್ ಗಾರ್ಡನ್' ರುವಾರಿ ನೆಕ್ ಚಾಂದ್